ಪುರಸ್ಕೃತ ಮತ್ತು ಶಿಕ್ಷಣ ಇಲಾಖೆಯ ನಡೆಸುವ ಶಾಖೆಗಳ ಕುರಿತು.

2169 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣಾಲಯ ಇಲಾಖೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಪುರಸ್ಕೃತ ವೃತ್ತಿ ಶಿಕ್ಷಣ ಇಲಾಖೆಯ ವತಿಯಿಂದ ರಾಜ್ಯದಲ್ಲಿ ನಡೆಸಲ್ಪಡುವ ಶಾಲೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಎಲ್ಲಾ ಶಾಲೆಗಳಲ್ಲಿ ನಡೆಸುವ ವೃತ್ತಿಪರ ಶಿಕ್ಷಣಕ್ಕೆ ಸಂಬಂಧಪಟ್ಟ ಅಧ್ಯಾಪಕರುಗಳನ್ನು ಯಾರು ನೇಮಿಸುತ್ತಾರೆ?

ಇ) ಇವರುಗಳ ಸಂಬಳ ಸಾರಿಗೆ ವೆಚ್ಚವನ್ನು ಯಾರು ಭರಿಸುತ್ತಾರೆ?

ಈ) ಇಂತಹ ವೃತ್ತಿಪರ ಶಿಕ್ಷಣ ತರಗತಿಗಳ ಅಧ್ಯಾಪಕರುಗಳಿಗೆ ಈವರೆಗೂ ಯಾವುದೇ ಸಂಬಳ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ವೃತ್ತಿ ಪರ ಶಿಕ್ಷಣಕ್ಕೆ ಬೇಕಾದ ಕಟ್ಟಡ ಮತ್ತು ಇತರ ಪರಿಕರಗಳಿಗೆ ಸರ್ಕಾರವು ಎಷ್ಟು ಅನುದಾನ ಬಿಡುಗಡೆ ಮಾಡಿದೆ?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣಾಲಯ ಇಲಾಖೆಗಳ ಸಚಿವರು.) :

ಅ) 808 ವೃತ್ತಿ ಶಿಕ್ಷಣಪದವಿ ಪುರ್ವ ಕಾಲೇಜುಗಳು (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ)

ಆ) ಆಯಾ ಕಾಲೇಜಿನ ಪ್ರಾಚಾರ್ಯರುಗಳು

ಇ) ನಿರ್ದಿಷ್ಠ ವೇತನ ಅನುಧಾನದ ಹೊರತು ಇವರುಗಳಿಗೆ ಬೇರೆ ಯಾವುದೇ ಭತ್ಯೆಗಳು ಇರುವುದಿಲ್ಲ. (ಸೇವೆ ಸಕ್ರಮಗೊಳ್ಳುವ ಸಿಬ್ಬಂದಿಗೆ ಅನ್ವಯಿಸಿದಂತೆ) ಈ ವೆಚ್ಚವನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು 25 : 75ರ ಅನುಪಾತದಂತೆ ಭರಿಸುತ್ತವೆ.

ಈ) ಇಲ್ಲ

ಉ) ಪ್ರತಿ ವೃತ್ತಿ ಶಿಕ್ಷಣ ಕೋರ್ಸಿಗೆ ಕಾರ್ಯಾಗಾರ ಕೊಠಡಿ ನಿರ್ಮಾಣಕ್ಕೆ ರೂ. 1.00 ಲಕ್ಷ ಹಾಗೂ ಉಪಕರಣಗಳಿಗಾಗಿ ರೂ. 1.00 ಲಕ್ಷದಂತೆ ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡುತ್ತಿದೆ. ಈವರೆಗೆ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ:

(ರೂ. ಲಕ್ಷಗಳಲ್ಲಿ)

ವರ್ಷ	ಬಿಡುಗಡೆಯಾದ ಅನುದಾನ	
	ಕಾರ್ಯಾಗಾರ ಕೊಠಡಿಗೆ	ಉಪಕರಣಗಳಿಗೆ
1988-89	105.00	120.00
1989-90 1990-91	17.24	62.50
1991-92	37.50	35.00
1992-93	116.26	225.00
1992-93	190.24	156.25
1993-94	300.00	200.00
1994-95	200.00	200.00
1995-96	100.00	100.00

ನಗರ ಪ್ರದೇಶಗಳಲ್ಲಿ ಶಿಕ್ಷಕರ ನೇಮಕಾತಿ

2171 - ಶ್ರೀ ಕುಂಬೈ ಸುಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕ್ಷಣ ಇಲಾಖೆಯಲ್ಲಿ 50 ಜನ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ ಎಂಬ ನೀತಿ ಜಾರಿಯಲ್ಲಿದೆಯೇ? ಇದ್ದಲ್ಲಿ ಅದು ಕಾರ್ಯರೂಪಕ್ಕೆ ತರಲಾಗಿದೆಯೇ?

ಆ) 1997-98ನೇ ಸಾಲಿನಲ್ಲಿ ನಗರ ಪ್ರದೇಶದಲ್ಲಿ ಹೊಸ ಶಿಕ್ಷಕರ ನೇಮಕಾತಿ ಇಲ್ಲ ಎಂಬುದು ನಿಜವೇ, ಹಾಗಿದ್ದಲ್ಲಿ ನಿವೃತ್ತರ ಸ್ಥಾನವಂತೂ ಶೂನ್ಯವಾಗುವ ಸಂಭವ ಉಂಟಾಗುವುದಿಲ್ಲವೆ?

ಇ) ನಿವೃತ್ತರ ಸ್ಥಾನಕ್ಕೂ, ಹೊಸ ಅವಶ್ಯಕತೆಯ ಸ್ಥಾನಕ್ಕೂ ನೇಮಕಾತಿ ಒದಗಿಸದಿದ್ದಲ್ಲಿ ಶಿಕ್ಷಣ ವ್ಯವಸ್ಥೆ ಸೊರಗುವುದಿಲ್ಲವೇ? ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆಯಾಗುವುದಿಲ್ಲವೇ?

ಈ) ಈ ಬಗ್ಗೆ ಸರ್ಕಾರದವರ ನಿಲುವುಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರಾಥಮಿಕ ಶಾಲೆಗಳಲ್ಲಿ ಈ ನೀತಿ ಅನುಸರಿಸಿ ಇದನ್ನು ಕಾರ್ಯರೂಪಕ್ಕೆ ತರಲಾಗಿದೆ. ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಪ್ರಮಾಣವನ್ನು ತರಗತಿ ಹಾಗೂ ವಿಭಾಗಗಳ ಆಧಾರದ ಮೇಲೆ ವಿಷಯವಾರು ನಿರ್ಧರಿಸಲಾಗುವುದು.